# ಸಲಾರ್ಪುರಿಯಾ ಸತ್ವಾದಿಂದ ಮೈಸೂರು ರಸ್ತೆಯಲ್ಲಿ ಆಶ್ರಯ

ಮೈಸೂರು: ಭಾರತದ ಪ್ರಮುಖ ಪ್ರಾಪರ್ಟಿ ಡೆವಲಪ್ಮೆಂಟ್, ನಿರ್ವಹಣೆ ಮತ್ತು ಸಲಹಾ ಸಂಸ್ಥೆಯಾದ ಸಲಾರ್ಪುರಿಯಾ ಸತ್ವಾ ಗ್ರೂಪ್ ಕೈಗೆಟುಕುವ ದರದಲ್ಲಿ ಆಶ್ರಯ-ಯೋಜನೆ ಯನ್ನು ಬಿಡದಿಯಲ್ಲಿ ಪ್ರಾರಂಭಿಸಿದೆ. ಹಚ್ಚ ಹಸಿರಿನ ತೆರೆದ ಸ್ಥಳಗಳಲ್ಲಿರುವ ಈ ಪ್ರಾಪರ್ಟಿ ಬೆಂಗಳೂರು-ಮೈಸೂರು 10 ಪಥದ ಎಕ್ಸ್ ಪ್ರೆಸ್ ವೇ ಬಳಿ 4.2 ಎಕರೆ ಪ್ರದೇಶದಲ್ಲಿದೆ. ಸತ್ವಾ ಆಶ್ರಯವು 4 ಯೋಜಿತ ಟವರ್‌ಗಳನ್ನು ಒಳಗೊಂಡಿದೆ 1, 2 ಮತ್ತು 3 ಬಿಎಚ್‌ಕೆ ಅಪಾರ್ಟ್ ಮೆಂಟ್‌ಗಳ ಆಯ್ಕೆ ಇದೆ ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಬಿಜಯ್ ಅಗರ್ವಾಲ್ ತಿಳಿಸಿದ್ದಾರೆ. ಗ್ರಾಹಕರಿಗೆ ಗುಣಮಟ್ಟದ ಮನೆಗಳನ್ನು ಒದಗಿಸುವ ಪರಂಪರೆಯನ್ನು ಸಂಸ್ಥೆ ಮುಂದು ವರಿಸುತ್ತಿದೆ. ಬಿಡದಿ ರಿಯಲ್ ಎಸ್ಟೇಟ್ ಮಾರು ಕಟ್ಟೆಗಳಲ್ಲಿ ಪ್ರಮುಖ ಸ್ಥಳವಾಗಿದೆ. ಗ್ರಾಹಕರ ನಿರೀಕ್ಷೆಗಳನ್ನು ಈಡೇರಿಸಲು ನಾವು ಈ ಯೋಜನೆ ಯನ್ನು ವಿನ್ಯಾಸಗೊಳಿಸಿದ್ದೇವೆ ಎಂದಿದ್ದಾರೆ. ಈ ಯೋಜನೆಯು ಸ್ಮಾರ್ಟ್ ಸಿಟಿ, ಸ್ಮಾರ್ಟ್ ಹೋಮ್' ನ ಪ್ರಮೇಯವನ್ನು ಆಧರಿಸಿದೆ ಮತ್ತು ತಮಗಾಗಿ ಸ್ಮಾರ್ಟ್ ಮತ್ತು ಉತ್ತಮ ಜೀವನವನ್ನು ಬಯಸುವ ಮಹತ್ವಾಕಾಂಕ್ಷೆಯ ಮನೆ ಮಾಲೀಕರಿಗೆ ಇದನ್ನು ಪೂರೈಸುತ್ತದೆ. ಮನೆ ಮಾಲೀಕರು ಎಲ್ಲಾ ಮನರಂಜನಾ ಅಗತ್ಯ ಗಳನ್ನು ಅದ್ಭುತವಾಗಿ ಪೂರೈಸುವ ವ್ಯವಸ್ಥೆಗಳು ಇಲ್ಲಿವೆ. 18.75 ಲಕ್ಷದಿಂದ ಮನೆಗಳ ಬೆಲೆ ಪ್ರಾರಂಭವಾಗುತ್ತವೆ ಎಂದು ವಿವರಿಸಿದ್ದಾರೆ.